## ಅಕ್ಕಿ, ಬೇಳೆ ಒಟ್ಟಿಗಿರಲಿ!

ಕೋವಿಡ್–19ನಿಂದಾಗಿ ದೇಶದಲ್ಲಿ ಲಾಕ್‌ಡೌನ್ ಇದ್ದಾಗ ಗುಂಡ ಶೆಟ್ಟರ ಅಂಗಡಿಗೆ ಹೋಗಿದ್ದ. ಅಗತ್ಯವಿರುವ ದಿನಸಿಗಳನ್ನು ಕೊಂಡ ನಂತರ, 'ಅಕ್ಕಿ ಮತ್ತು ತೊಗರಿ ಬೇಳೆ ಎರಡನ್ನು ಒಂದೇ ಚೀಲದೊಳಗೆ ಹಾಕಿ ಕೊಡಿ' ಎಂದ. ಆಶ್ಚರ್ಯಗೊಂಡ ಶೆಟ್ಟರು, 'ಬೇಡಪ್ಪಾ, ನಿಮಗೆ ತುಂಬಾ ಕೆಲಸವಾಗುತ್ತೆ, ಎರಡೂ ಬೇರೆ ಬೇರೆ ಕಟ್ಟಿಕೊಡ್ತೀನಿ' ಎಂದರು. ಗುಂಡ, 'ನಿಮಗೇನೋ ಅಂಗಡಿಯಲ್ಲಿ ಸಮಯ ಕಳೆದುಹೋಗುತ್ತದೆ. ಆದರೆ, ನಮಗೆ ಹಾಗಲ್ಲ. ಮನೆಯಲ್ಲಿ 24 ಗಂಟೆ ಏನು ಮಾಡೋದು ಅಂತಾನೇ ಗೊತ್ತಾಗ್ತಾ ಇಲ್ಲ... ಮನೆಗೆ ಹೋಗಿ, ಅವೆರಡನ್ನು ಬಿಡಿಬಿಡಿಯಾಗಿ ಬೇರೆ ಮಾಡಿ ಸಮಯ ಕಳೆಯಬಹುದು! ಎಲ್ಲಾ ಕೂಡಿಸಿಯೇ ಕಟ್ಟಿಕೊಡಿ' ಎಂದ.

**ವಿ. ವಿಜಯೇಂದ್ರ ರಾವ್**





## ಏನೂ ಗೊತ್ತಾಗುವುದಿಲ್ಲ!

ಪರಮೇಶಿಯನ್ನು ಶಸ್ತ್ರಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದ್ದರು. ಅರಿವಳಿಕೆ ಇತ್ಯಾದಿ ಪ್ರಕ್ರಿಯೆಗೆ ಮೊದಲು ಅವನ ತಂದೆಯ ಒಪ್ಪಿಗೆಗಾಗಿ ಸಂಬಂಧಿತ ನಮೂನೆಯಲ್ಲಿ ಸಹಿ ಮಾಡಲು ವೈದ್ಯರು ಹೇಳಿದರು. ಶಸ್ತ್ರಚಿಕಿತ್ಸೆಯ ಕುರಿತು ವೈದ್ಯರು ವಿವರಿಸಿದ ನಂತರ ಪರಮೇಶಿಯ ತಂದೆ, 'ಈ ಅರಿವಳಿಕೆಯಿಂದ ಏನು ಉಪಯೋಗ?' ಎಂದು ಕೇಳಿದ. 'ಅರಿವಳಿಕೆ ನೀಡಿದರೆ ಅವನಿಗೆ ಏನೂ ಗೊತ್ತಾಗುವುದಿಲ್ಲ!' ಅಂದರು ವೈದ್ಯರು. 'ಅವನಿಗೆ ಈಗಲೂ ಏನೂ ಗೊತ್ತಾಗುವುದಿಲ್ಲ ಸ್ವಾಮಿ, ಅವನಿಗೆ ಬುದ್ಧಿ ಬೆಳೆದಿಲ್ಲ, ನೀವು ಹಾಗೇ ಆಪರೇಶನ್ ಮಾಡಬಹುದು!' ಅಂದ.

**ಎಂ.ಕೆ. ಬದರಿನಾಥ್**